"ಆದ್ರೂ ನಿಮ್ ತರ ಅಲ್ಲ ಬಿಡು ನೀವೇ ಬೇರೆ ಲೀಗು. ನಾವೇನಿದ್ರೂ ಹಾಲಿಡೇ ಪಿಚ್ಚರ್ಸ್ ಹಾಕಕ್ಕೆ ಮಾತ್ರ ಲಾಯಕ್ಕು ಅಂತ ನಿಮ್ ಲೆಕ್ಕ."

ತಲೆ ಕೆಟ್ಟು ಹೋಯಿತು.

ಇದ್ದ ಬಂಧದಿಂದ ಕಳಚಿಕೊಳ್ಳಬಹುದು. ಇಲ್ಲದಿದ್ದ ಬಂಧದಿಂದ ಬಿಡುಗಡೆ ಹೇಗೆ? ಇದು ಇನ್ನೊಂದು ರೀತಿಯ ಭ್ರಮೆಯೇ? ಇದ್ದದ್ದು ಇಲ್ಲದಂತಾಗುವುದು, ಇರುವುದು ಇರುವವೆಂಬ ಭ್ರಮೆ ಮೂಡಿಸುತ್ತಲೇ ಇಲ್ಲದಂತೆ ಕಾಣುವುದು ಎಲ್ಲವೂ ಕಡೆಗೆ ಅನಂತ ಶೂನ್ಯ ಅನ್ನಿಸುವುದು ಅಬ್ಬಬ್ಬಬ್ಬ!

ಜೀವನವೇ ಒಂದು ಕೂಪ. ಅದರಲ್ಲಿ ಸಾಮಾಜಿಕ ಜಾಲತಾಣವೆಂಬ ಇನ್ನೊಂದು ಭ್ರಮಾ ಕೂಪ. ಅದರಲ್ಲಿ ನಾವೇನೋ ಘನವಾದದ್ದನ್ನ ಬದುಕುತ್ತಾ ಕಂಡುಹಿಡಿಯುತ್ತಾ ಹಂಚಿಕೊಳ್ಳುತ್ತಾ, ಚರ್ಚಿಸುತ್ತಾ ಇದ್ದೀವಿ. ಇದರಿಂದ ಮಹತ್ತರವಾದದ್ದು ಘಟಿಸುತ್ತೆ ಎಂದು ನಂಬಿರುವ ನಮ್ಮಂತಹ ಪಾಮರರನ್ನು ಉಪಯೋಗಿಸಿಕೊಂಡು ಅಮೆರಿಕದಲ್ಲಿ ಕೂತಿರುವ ತಂತ್ರಜ್ಞಾನ ಕಂಪನಿಯ ಮಿಲಿಯನೇರ್ ಮಾಲೀಕರೆಲ್ಲಾ ಹೆಚ್ಚು ಹೆಚ್ಚು ಗಳಿಸುತ್ತಿರುವಾಗ ಕಂಪ್ಯೂಟರಿನ ಮುಂದೆಯೋ ಅಥವಾ ಸೋಮಾರಿ ಮೊಬೈಲಿನ ಪರದೆಯ ಮೇಲೋ ಕುಟ್ಟುತ್ತಾ ನಮ್ಮ ನಮ್ಮ ಅಹಮ್ಮಿನ ಕೋಟೆಗಳಲ್ಲಿ ಬಂದಿಗಳಾಗಿ ದುಡಿಯದೆ, ದುಕ್ಕುಬಡಿಯದೆ ಯಾರದೋ ಸೊಕ್ಕೆಂಬ ಗಾಂಡೀವಿಯನ್ನು ಮುರಿದೇಬಿಟ್ಟೆವೆಂಬ ಅರೆಕಾಸಿನ ಹೆಮ್ಮೆಯಲ್ಲಿ ನಾವು. ಇದರಲ್ಲಿ ಯಾರು ಯಾರಿಗೆ ಯಾಮಾರಿಸುತ್ತಿದ್ದಾರೆ ಎನ್ನುವುದು ಹಗಲಿನಷ್ಟೇ ಸ್ಪಷ್ಟ.

ಸ್ನೇಹಿತನೊಬ್ಬ ತನ್ನ ವೈಚಾರಿಕ ವೈರಿಯನ್ನು "ಸದೆ ಬಡಿದ" ಬಗ್ಗೆ ಮೊನ್ನೆ ಹೇಳುತ್ತಿದ್ದ. "ಸರ್ರ್ಯಾಗಿ ಚಚ್ಚಾಕ್ ಬಿಟ್ಟಿದೀನಿ ಕಣೇ! ಇನ್ನೊಂದ್ಸಾರಿ ನನ್ ವಿಚಾರುಕ್ ಬಂದಿರಬಾರ್ದು ಮಗ!"

"ಯಾವ ವಿಷಯಕ್ಕೋ ಜಗಳ?"

"ವಿಷಯ ಇಂಥದ್ದೇ ಅಂತೇನಿಲ್ಲ ಕಣೇ. ನಾನೂ ನೋಡ್ತಾನೇ ಇದ್ದೆ. ನಾನು ನನ್ ವಾಲಿನ ಮೇಲೆ ಏನ್ ಬರ್ಕೊಂಡ್ರೂ ಬಂದು ಬಾಲ ಅಲ್ಲಾಡುಸ್ತಿದ್ದ. ಏನೋ ಕೊಂಕು ತೆಕ್ಕೊಂಡು ಕಯ ಪಯ ಶುರು ಮಾಡದು... ಯಾವ್ಯಾವುದನ್ನೋ ತಳಕು ಹಾಕಿ ತಲೆ ಕೆಡ್ಸದು... ಅದಕ್ಕೇ ಮೊನ್ನೆ ಇನ್ಯಾರದೋ ವಾಲಿನಲ್ಲಿ ಏನೋ ಕ್ಯಾತೆ ತೆಕ್ಕೊಂಡಿದ್ದ, ಇನ್ಯಾರೋ ಬಂದು ತಗಲಾಯ್ಕೊಂಡ್ರು; ನಾನೂ ಸೇರ್ಕೊಂಡು ಅವ್ನನ್ನ ಹಣ್ಣುಗಾಯಿ ನೀರುಗಾಯಿ ಮಾಡಿ ಕೈ ಬಿಟ್ವಿ... ಇನ್ನು ಫೇಸ್‌ಬುಕ್ಕಿನ ಕಡೆ ತಲೆ ಹಾಕಿ ಕೂಡ ಮಕ್ಕಬಾರದು ಮಗ!"

"ಅಬ್ಬಬ್ಬ! ಎಂಥಾ ಶೂರರೋ ನೀವೆಲ್ಲಾ! ಆ ಫೇಸ್‌ಬುಕ್ ಮಾಡಿರೋ ಮಾರ್ಕ್ ಜುಕರ್‌ಬರ್ಗನಿಗೇ ಇವೆಲ್ಲಾ ಬ್ಯಾಡ. ನಿಮಗೆ ಇವೆಲ್ಲಾ ಒಂದು ದೊಡ್ಡ ಕ್ಯಾಮೆ... ಮಾಡು ಮಾಡು..." ಎಂದು ತಮಾಷೆ ಮಾಡಿದೆ. ಫೇಸ್‌ಬುಕ್ಕು ಒಂಥರಾ ಕಾಲಪ್ರಯಾಣದ ಹಾಗೆ. ಮತ್ತೆ ಸ್ಕೂಲಿಗೆ ಹೋಗಿದ್ದೇವಾ ಹೇಗೆ!

ಸ್ಕೂಲಿಗೆ ಸೇರಿದ ಹೊಸತರಲ್ಲಿ ಯಾರ್‍ಯಾರ ಹತ್ತಿರ ಯಾವ್ಯಾವ ಕಾರಣಕ್ಕೆ ಜಗಳ ಆಡಿದ್ದೆವು, ಆಡಿ ಮಾತು ಬಿಟ್ಟು ಹದಿಹರೆಯಕ್ಕೆ ಬಂದಾಗಲೂ ಅದ್ಯಾವುದೋ ಹಳೆ ಮುನಿಸಿನ ಎಳೆ ಹಿಡಿದುಕೊಂಡು ಮತ್ತೆ ಹೊಸ ಜಗಳಗಳನ್ನು ಆಡುತ್ತಿದ್ದೆವು ಎನ್ನುವುದನ್ನು ನೆನೆಸಿಕೊಂಡರೆ ನಗು ಬರುತ್ತದೆ. ಅಲ್ವಾ?

ಇಲ್ಲಿನ ಅಭಿಮಾನಿ ದೇವರುಗಳದ್ದು ಇನ್ನೊಂದು ರೀತಿಯ ಕತೆ. ತಮ್ಮ ನೆಚ್ಚಿನ ನಟರ ಸಿನಿಮಾ ವಿಮರ್ಶೆ ಬರೆದು ಸರ್ಕ್ಯುಲೇಟ್ ಮಾಡುವುದು. ಶೇರ್ ಮಾಡಿ ಶೇರ್ ಮಾಡಿ ಎಂದು ಪ್ರಾಣ ತೆಗೆದುಬಿಡುವುದು. ಆ ಸಿನಿಮಾವನ್ನು ಯಾರಾದರೂ ತೆಗಳಿದರೋ, ತಗಾ ಮುಗೀತು ಕತೆ! ಅವರ ಜನ್ಮ ಜಾತಕ, ಜಾತಿ, ವಿದ್ಯೆ, ಊರು, ವೃತ್ತಿ, ಹೆಂಡಿರು, ಮಕ್ಕಳು, ಎಲ್ಲರನ್ನೂ ನೀವಾಳಿಸಿ ಒಗೆದು ಬಿಡುವುದು.

"ಯೋ! ಅಣ್ಣನ್ ಸಿನ್ಮಾ ಬಗ್ಗೆ ಮಾತಾಡಕೆ ಯೋಗ್ಯತೆ ಐತಾ ಮಗ್ನೆ? ವೋಗು ನೀನೇ ಒಂದ್ ಸಿನ್ಮಾ